**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಓ.ಎಸ್. ನಂಬರಃ 22/2017**

**ಪಿ.ಡಬ್ಲ್ಯೂಃ 03**

| | | |
|---|---|---|
| ಸಾಕ್ಷಿದಾರನ ಹೆಸರು | : | ಭಾಸ್ಕರ ನಾಯ್ಕ |
| ತಂದೆಯ ಹೆಸರು | : | ಗಣಪತಿ ನಾಯ್ಕ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಶಾಖಾ ವ್ಯವಸ್ಥಾಪಕ |
| ವಾಸ್ತವ್ಯ | : | ಆಸರಕೇರಿ, ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 06-02-2026**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ನಾನು 1997 ರಿಂದ ಭಟ್ಕಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದು, ಪ್ರಸ್ತುತ ನಾನು ನವಾಯತ ಕಾಲೋನಿಯ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಬ್ಯಾಂಕಿನ ನವಾಯತ ಕಾಲೋನಿಯ ಶಾಖೆಯಲ್ಲಿ ಪ್ರತಿವಾದಿ ಎ.ಎಸ್.ಎಸ್. ಟ್ರೇಡರ್ಸ ಎಂಬ ಹೆಸರಿನಲ್ಲಿ ಚಾಲ್ತಿ ಖಾತೆಯನ್ನು ಹೊಂದಿರುತ್ತಾರೆ. ಸದ್ರಿ ಖಾತೆಯ ಸಂಖ್ಯೆ 14 ಆಗಿರುತ್ತದೆ. ಸದ್ರಿ ಖಾತೆಯನ್ನು ತೆರೆಯಲು ನೀಡಿದ ಅರ್ಜಿಯ ನಕಲನ್ನು ಈ ದಿನ ಹಾಜರುಪಡಿಸಿರುತ್ತೇನೆ. ಸದ್ರಿ ದಾಖಲೆಯ ಮೂಲ ಪ್ರತಿ ನ್ಯಾಯಾಲಯದ ಕಡತದಲ್ಲಿ ಇದ್ದ ಕಾರಣ, ಮೂಲ ಪ್ರತಿಯನ್ನು ನಿಪಿ-31 ಎಂದು ಗುರುತಿಸಲಾಯಿತು. ಸದ್ರಿ ಖಾತೆಯನ್ನು ತೆರೆದಾಗ ಪ್ರತಿವಾದಿ ಲೆಟರ್ ಆಫ್ ಪ್ರೊಪ್ರೈಟರ್ ಶಿಫ್, ನೊಮಿನೇಷನ್ ಪತ್ರ, ಜಾಲಿ ಗ್ರಾಮ ಪಂಚಾಯತಿಯವರು ನೀಡಿದ ಪರವಾನಿಗೆಯ ಎರಡು ಪ್ರತಿಗಳು ಮತ್ತು ಕರ ರಶೀದಿ ಹಾಗೂ ದಿನಾಂಕಃ 13-10-2011 ರ ಡೀಡ್ ಆಫ್ ಲೀಸ್ ನ ಪ್ರತಿಯನ್ನು ನೀಡಿರುತ್ತಾರೆ. ಸದ್ರಿ ದಾಖಲೆಗಳನ್ನು ನಾನು ಈ ದಿನ ಹಾಜರುಪಡಿಸಿರುತ್ತೇನೆ. ಸದ್ರಿ ದಾಖಲೆಗಳಲ್ಲಿ ಪರವಾನಿಗೆ, ಕರ ರಶೀದಿ ಮತ್ತು ಲೀಸ್ ಡೀಡ್ ನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಅದು ಜೆರಾಕ್ಸ ಪ್ರತಿಗಳು ಎಂದು ತಕರಾರು ಮಾಡಿರುತ್ತಾರೆ. ಸದ್ರಿ ತಕರಾರಿಗೆ ಒಳಪಟ್ಟು ಎರಡು ಪರವಾನಿಗೆ ಪತ್ರವನ್ನು ನಿಪಿ-32 ಮತ್ತು 33 ಎಂದು, ಕರ ರಶೀದಿಯನ್ನು ನಿಪಿ-34 ಎಂದು, ಡೀಡ್ ಆಫ್ ಲೀಸ್ ನ್ನು ನಿಪಿ-35 ಎಂದು ಗುರುತಿಸಲಾಯಿತು. ಲೆಟರ್ ಆಫ್ ಪ್ರೊಪ್ರೈಟರ್ ಶಿಫ್ ಮತ್ತು ನೊಮಿನೇಷನ್ ಪತ್ರಗಳನ್ನು ನಿಪಿ-36 ಮತ್ತು 37 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆ.ನ್ಯಾ.ದಂ., ಭಟ್ಕಳ.**